# 23

# ನೀವು ಯೋಚಿಸುವುದಕ್ಕಿಂತಲೂ ಹೆಚ್ಚು ಅಮೂಲ್ಯರು ನೀವಾಗಿದ್ದೀರಿ

## ಮತ್ತಾಯ 5:13, ಒಂದು ನಿಕಟ ನೋಟ

ನಾನು ನಿಮ್ಮ ಮುಂದೆ ಉಪ್ಪು ಮತ್ತು ಬೆಳಕನ್ನು ಪ್ರತಿನಿಧಿಸುವ ಉಪ್ಪಿನ ಮತ್ತು ಮೇಣದ ಬತ್ತಿಯ ಒಂದು ಪೆಟ್ಟಿಗೆಯನ್ನು ಇಟ್ಟಿದ್ದೇನೆಂದು ಊಹಿಸಿಕೊಳ್ಳಿರಿ. ಉಪ್ಪು ಮತ್ತು ಬೆಳಕು ಇವೆರಡೂ ಭೂಮಿಯ ಮೇಲಿರುವ ಬಲು ಸಹಜ ಸಂಗತಿಗಳಾಗಿವೆ. ಜಗತ್ತಿನ ಯಾವುದೇ ಕಡೆಗೆ ನೀವು ಹೋಗಿರಿ, ಉಪ್ಪು ಮತ್ತು ಬೆಳಕು ಎಲ್ಲಡೆಯಲ್ಲಿಯೂ ನಿಮಗೆ ಸಿಕ್ಕುವುದಾಗಿದೆ.

ಯೇಸುವಿನ ದಿನದಲ್ಲಿಯೂ ಕಡಾ ಇವು ಸಾಮಾನ್ಯವಾದ ಸಂಗತಿಗಳಾಗಿದ್ದವು. ಯೇಸು ಬಾಲಕನಾಗಿದ್ದಾಗ ಆತನ ತಾಯಿ ಮಾಂಸಕ್ಕೆ ಉಪ್ಪು ಹಾಕುವುದನ್ನು ನೋಡರಬಹುದು, ಮತ್ತು ಸಂಜೆಯಲ್ಲಿ ಆಕೆಯು ತನ್ನ ಚಿಕ್ಕ ದೀಪವನ್ನು ಹತ್ತಿಸುವುದನ್ನೂ ನೋಡಿರಬಹುದು. ಅತೀ ಸಾಮಾನ್ಯರಾದ ಅವರಿಗೆ, ಹೇಗೋ, ಕ್ರೈಸ್ತರಿಗೆ ಅವರ ಒಂದು ದೊಡ್ಡ ಅರ್ಹತೆಯನ್ನು ಹೇಳಲು ಹಾಗೂ ಅವರ ದೊಡ್ಡ ಸವಾಲುಗಳಿಗಾಗಿ ಅವರನ್ನು ಮುಂದೆ ಇರಿಸಲು ಯೇಸು ಉಪ್ಪು ಮತ್ತು ಬೆಳಕಿನ ಉದಾಹರಣೆಯನ್ನು ಬಳಸಿನು:

> ನೀವು ಭೂಮಿಗೆ ಉಪ್ಪಾಗಿದ್ದೀರಿ, ಉಪ್ಪು ಸಪ್ಪಗಾದರೆ ಯಾತರಿಂದ ಉಪ್ಪಿನ ರುಚಿ ಬಂದಿತು? ಜನರು ಅದನ್ನು ಹೊರಗೆ ಹಾಕಿ ತುಳಿಯುವುದಕ್ಕೆ ಅದು ಯೋಗ್ಯವೇ ಹೊರತು ಮತ್ತೇ ಯಾವ ಕೆಲಸಕ್ಕೂ ಬಾರದು. ನೀವು ಲೋಕಕ್ಕೆ ಬೆಳಕಾಗಿದ್ದಿರಿ.
>
> ಗುಡ್ಡದ ಮೇಲೆ ಕಟ್ಟಿರುವ ಊರು ಮರೆಯಾಗಿರಲಾರದು ಮತ್ತು ದೀಪವನ್ನು ಹೊತ್ತಿಸಿ ಯಾರೂ ಕೊಳಗದೊಳಕ್ಕೆ ಇಡುವುದಿಲ್ಲ; ದೀಪಸ್ಥಂಭದ ಮೇಲೆ ಇಡುತ್ತಾರಷ್ಟೇ. ಆಗ ಅದು ಮನೆಯವರೆಗೆಲ್ಲರಿಗೆ ಬೆಳಕನ್ನು ಕೊಡುವದು. ಅದರಂತೆ ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ. ಹೀಗಾದರೆ ನಿಮ್ಮ ಒಳ್ಳೆಯ ಕ್ರಿಯೆಗಳನ್ನು ನೋಡಿ ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ಕೊಂಡಾಡುವವರು (ಮತ್ತಾಯ 5:13-16).

ಈ ವಾಕ್ಯಗಳು ಪರ್ವತ ಪ್ರಸಂಗದಲ್ಲಿ ಎರಡನೆಯ ಪ್ರಮುಖ ಭಾಗವಾಗಿವೆ. ಯೇಸು ಆಗ ತಾನೇ ಕ್ರೈಸ್ತರ ಗುಣಲಕ್ಷಣಗಳ ವಿವಿಧ ರೂಪರೇಶೆಗಳ ಧನ್ಯತೆಗಳನ್ನು ಕೊಟ್ಟಿದ್ದನು. ಮುಂದೆ ಆತನು ಅದರ *ಪರಿಣಾಮದ* ಗುಣಲಕ್ಷಣಗಳನ್ನು ಹೇಳುತ್ತಾ, "ನೀವು ಭೂಮಿಗೆ ಉಪ್ಪಾಗಿದ್ದೀರಿ"; "ನೀವು ಲೋಕಕ್ಕೆ ಬೆಳಕಾಗಿದ್ದಿರಿ" ಎಂದು ಆತನು ಹೇಳಿದನು. ಇದು ಬಹುಶಃ ಕ್ರೈಸ್ತರ ಪ್ರಭಾವದ ಶಕ್ತಿಯನ್ನು ತೋರಿಸುವ ಶ್ರೇಷ್ಟವಾದ ಭಾಗವಾಗಿದೆ.

ನಾನು ಕೆಲಸಾರಿ ಈ ಪಾಠವನ್ನು "ನಿನ್ನನ್ನು ನೀವು ಅಲ್ಪವಾದುದಕ್ಕೆ ಮಾರಿಕೊಳ್ಳಬೇಡ" ಎಂದು ಕರೆಯುತ್ತೇನೆ.[1] ನೀವು ಗಣನೆಗೆ ಬಾರದವರು ಎಂದು ನೀವು ಯೋಚಿಸಬಹುದು, ನಾನು ನಿಮಗೆ ಹೇಳುವುದೇನೆಂದರೆ ಉಪ್ಪು ಮತ್ತು ಬೆಳಕು ಬಲು ಪ್ರಮುಖವಾದವುಗಳು ಆಗಿವೆ. ಉಪ್ಪು ಮತ್ತು ಬೆಳಕು ಇಲ್ಲದೆ ಜೀವಿಯು ಉಳಿಯಲಾರದು. ಭೌತಿಕವಾದ ಜೀವಿತದ ಕಾರ್ಯಕ್ಕಾಗಿ ಉಪ್ಪಿನ ಅವಶ್ಯಕತೆಯು ಇದೆ,[2] ಮತ್ತು ಭೌತಿಕವಾದ ಜೀವಿತ ಬೆಳಕು ಇಲ್ಲದೇ

ಅಸ್ತಿತ್ವಕ್ಕೆ ಬಾರದು. ಒಂದು ವೇಳೆ ಒಮೇಲೇ ಸೂರ್ಯನು ನಂದಿಹೋಗಿದ್ದಾದರೆ, ಒಂದೇ ತಾಸಿನಲ್ಲಿ ನಮ್ಮ ಗ್ರಹವು ಮಂಜುಗಡ್ಡೆಯಿಂದ ತುಂಬಿಹೋಗುವದು. ಕ್ರೈಸ್ತರಾದ ನೀವು ಉಪ್ಪು ಮತ್ತು ಬೆಳಕಿನಂತೆ ಇದ್ದೀರಿ ಎಂದು ಹೇಳುವಾಗ, ನೀವು ಬಹು ಅಮೂಲ್ಯರಾಗಿದ್ದಿರಿ ಎಂದು ಹೇಳುತ್ತಿದ್ದಾನೆ ಮತ್ತು ಆತನ ಉದ್ದೇಶವು ನೀನಿಲ್ಲದೆ ಸಂಪೂರ್ಣವಾಗದು.

ನಿನ್ನನ್ನು ಕುರಿತು ಪ್ರತಿಯೊಬ್ಬ ವ್ಯಕ್ತಿಯೂ ಪ್ರಭಾವ ಬೀರಲು ಶಕ್ತನಾಗಿದ್ದಾನೆ. ಒಂದು ಅತಿ ಚಿಕ್ಕದಾದ ಕೂದಲು ಕೂಡ ನೆರಳನ್ನು ಉಂಟುಮಾಡುವುದಾಗಿದೆ, ಚಿಕ್ಕ ಕಲ್ಲು ನೀರಿನಲ್ಲಿ ಅಲೆಯನ್ನು ಎಬ್ಬಿಸಲು ಶಕ್ತವಾಗಿದೆ, ಹಾಗೆಯೇ ನೀನು ಪ್ರಭಾವವನ್ನು ಹೊಂದಿದವನು ಮತ್ತು ಆ ಪ್ರಭಾವವನ್ನು ತನಗೋಸ್ಕರ ಉಪಯೋಗಿಸಬೇಕೆಂದು ಯೇಸು ಬಯಸುವವನಾಗಿದ್ದಾನೆ.

ನೀವು ಕರ್ತನಿಗೆ ಹೇಗೆ ಮಹತ್ತರವಾಗಿದ್ದೀರಿ ಎಂಬುದನ್ನು ನೋಡಲು ನಮ್ಮ ವೇದ ಭಾಗಕ್ಕೆ ಈಗ ನಾವು ಸಾಗುವಾ. ಈ ಪ್ರಸಂಗದಲ್ಲಿ, ಭೂಮಿಗೆ ಉಪ್ಪಾಗಿ ಇರುವುದರ ಬಗೆಗೆ ಚರ್ಚಿಸಲಿಕ್ಕಿದ್ದೇವೆ. ಮುಂದಿನದರಲ್ಲಿ, ಜಗತ್ತಿಗೆ ಬೆಳಕಾಗಿ ಇರುವುದರ ಬಗೆಗೆ ಮಾತನಾಡುವಾ.[3]

## ಒಂದು ಪ್ರಶಂಸೆ

"ನೀವು ಭೂಮಿಗೆ ಉಪ್ಪಾಗಿದ್ದೀರಿ" ಎಂದು ಯೇಸು ಹೇಳುವಾಗ ಎಲ್ಲಕ್ಕಿಂತ ಮೊದಲು ಆತನ ಮಾತುಗಳು ಪ್ರಶಂಸೆಯನ್ನು ಹೊಂದಿದವುಗಳು ಆಗಿದ್ದವು. ಅಲ್ಲಿಯೇ ನಾವು "ಆತನು ಭೂಮಿಗೆ ಉಪ್ಪಾಗಿದ್ದಾನೆ"[4] ಎಂಬ ಉದ್ಧಾರವಾಚಕವನ್ನು ಪಡೆಯುವವರಾಗಿದ್ದೇವೆ.

ಯೇಸು ಈ ಪ್ರಶಂಸೆ ಯೆಹೂದಿ ನಾಯಕರನ್ನು ಅಥವಾ ರೋಮನ್ ಸಭಾಧ್ಯಕ್ಷನನ್ನು ಅಥವಾ ಅಥೇನಿನ ತತ್ವಜ್ಞಾನಿಗಳನ್ನು ಉದ್ದೇಶಿಸಿ ಮಾತನಾಡಲಿಲ್ಲ, ಬದಲಾಗಿ ತನ್ನ ಕೇಳುಗರನ್ನು, ಒಕ್ಕಲಿಗರನ್ನು, ವ್ಯಾಪಾರಿಗಳನ್ನು ಮತ್ತು ಅವರ ಹೆಂಡತಿಯರು ಮತ್ತು ಮಕ್ಕಳನ್ನು ಉದ್ದೇಶಿಸಿ ಮಾತನಾಡಿದನು. ಆತನು, "ಸಾಮಾನ್ಯ ಜನರು" ಎಂದು ಜಗತ್ತು ಕರೆಯುವವರನ್ನು ಹೊಗಳಿದನು.

"ನೀವು ಭೂಮಿಗೆ ಉಪ್ಪಾಗಿದ್ದೀರಿ" ಎಂದು ಹೇಳಿಕೆಯು ಜಗತ್ತಿನ ಬಗೆಗೆ ಒಂದು ಸಂಗತಿಯನ್ನು ಹೇಳುವುದಾಗಿದೆ, ಮತ್ತು ಇದು ಯೇಸುವಿನ ಹಿಂಬಾಲಕರ ಬಗೆಗೆ ಒಂದು ಸಂಗತಿಯನ್ನು ಹೇಳುವುದಾಗಿದೆ. ಈ ಪದಗಳ ಮಹತ್ವವನ್ನು ಶ್ಲಾಘಿಸುವುದರ ಜೊತೆಗೆ, ಸತ್ಯವೇದದ ಸಮಯದಲ್ಲಿ ಉಪ್ಪಿನ ಪಾತ್ರವನ್ನು ನಾವು ಅರಿತುಕೊಳ್ಳಬೇಕು.

### ಉಪ್ಪು ಅಮೂಲ್ಯವಾದದ್ದು

ಉಪ್ಪು ಯೇಸುವಿನ ಸಮಯದಲ್ಲಿ ಅಮೂಲ್ಯವಾದದ್ದು ಆಗಿತ್ತು. ಇದು ಯಾವಾಗಲೂ ಕೊಡು ತೆಗೆದುಕೊಳ್ಳುವಿಕೆಯ ಅಥವಾ ಕೂಲಿಯವರ "ಸಂಬಳದ ಮಧ್ಯವರ್ತಿಯಾಗಿ ಬಳಸಲ್ಪಡುತ್ತಿತ್ತು."[5]

ಯೇಸು "ನೀವು ಭೂಮಿಗೆ ಉಪ್ಪಾಗಿದ್ದೀರಿ" ಎಂದು ಹೇಳಿದನು ಮತ್ತು ಉಪ್ಪು ಅಮೂಲ್ಯ ವಾದದ್ದು ಆಗಿತ್ತು. ಇದು ಯಾಕೆ ಭೂಮಿಯ ಬಗೆಗೆ ಹೇಳುತ್ತದೆ? ಇದು ಈ ಭೂಮಿಗೆ ಯಾವ ನೈಜ ಬೆಲೆಯೂ ಇಲ್ಲ ಎಂದು ಇದು ಹೇಳುವುದಾಗಿದೆ. ಕ್ರೈಸ್ತರ ಬಗೆಗೆ ಇದು ಏನು ಹೇಳು ವುದಾಗಿದೆ? ಕ್ರೈಸ್ತರು ಯೋಗ್ಯತೆಯನ್ನು ಹೊಂದಿದವರಾಗಿರುತ್ತಾರೆ ಮತ್ತು ಜಗತ್ತಿಗೆ ಒಂದು ಮಹತ್ವವು ಬರುವದು ಕ್ರೈಸ್ತರ ಅಸ್ತಿತ್ವದಿಂದಲೇ.

ನೀವು ಕ್ರೈಸ್ತರಾದರೆ, ನೀವು ದೇವರ ದೃಷ್ಟಿಯಲ್ಲಿ ಅಮೂಲ್ಯರಾಗಿದ್ದೀರಿ. ಅಲ್ಪದಕ್ಕೆ ನಿಮ್ಮನ್ನು ನೀವು ಮಾರಿಕೊಳ್ಳದಿರಿ.

## ಉಪ್ಪು ಸುವಾಸನೆ ಬೀರುತ್ತಿತ್ತು

ಆ ದಿನಗಳಲ್ಲಿ ಇಂದಿನಂತೆಯೇ, ಆಹಾರಕ್ಕೆ ರುಚಿಯನ್ನು ಹೆಚ್ಚಿಸಲು ಉಪ್ಪನ್ನು ಬಳಸುತ್ತಿದ್ದರು. "ಸಪ್ಪೆಯನ್ನು ಉಪ್ಪಿಲ್ಲದೆ ತಿನ್ನಬಹುದೇ, ಮೊಟ್ಟೆಯಲ್ಲಿರುವ ಲೋಳೆಯು ರುಚಿಯೇ" ಎಂದು ಯೋಬನು ಹೇಳುತ್ತಾನೆ (ಯೋಬ 6:6). ಉಪ್ಪಿಲ್ಲದ ಊಟವು "ಅಸಹ್ಯವಾದದ್ದು" ಎಂದು ಮೂಲಪಿತೃಗಳು ಅಭಿಪ್ರಾಯಪಡುತ್ತಾರೆ (ವಚನ 7).[6]

ಒಬ್ಬ ಅರಸನು ತನ್ನ ಮೂವರು ಪುತ್ರಿಯರಿಗೆ ತನ್ನನ್ನು ಯಾರು ಬಹುವಾಗಿ ಪ್ರೀತಿಸುತ್ತಾರೆ ಎಂದು ಕೇಳಿದನು.

> ಮೊದಲಿನ ಇಬ್ಬರು ತಾವು ಜಗತ್ತಿನ ಎಲ್ಲಾ ಬೆಳ್ಳಿ ಬಂಗಾರಗಳಿಂತಲೂ ಹೆಚ್ಚಾಗಿ ಪ್ರೀತಿಸುವುದಾಗಿ ಉತ್ತರಿಸಿದರು. ಅದರೆ ಚಿಕ್ಕವಳು ತಾನು ಉಪ್ಪಿಗಿಂತ ಹೆಚ್ಚಾಗಿ ಪ್ರೀತಿಸುವುದಾಗಿ ಹೇಳಿದಳು. ಅರಸನು ಉಪ್ಪು ಅಷ್ಟೊಂದು ರುಚಿಕರವಾದ್ದಲ್ಲ ಎಂದು ಯೋಚಿಸಿ ಆಕೆಯ ಉತ್ತರದಿಂದ ಅಸಂತುಷ್ಟನಾದನು. ಆದರೆ ಅವಳ ಮಾತನ್ನು ಕೇಳಿಸಿಕೊಂಡ ಅಡಿಗೆಯವನು ಮರುದಿನ ಮುಂಜಾನೆಯ ಯಾವುದೇ ತಿಂಡಿಗೆ, ಹಾಗೂ ಮಧ್ಯಾಹ್ನದ ಊಟಕ್ಕೆ ಉಪ್ಪನ್ನು ಹಾಕಲಿಲ್ಲ, ಹೀಗೆ ಅರಸನು ಆ ನೀರಸವಾದ ಊಟವನ್ನು ಆನಂದಿಸಲಿಲ್ಲ. ನಂತರ ಆತನು ತನ್ನ ಮಗಳ ಮಾತಿನ ವರೆಸೆಯೆಡೆಗೆ ಲಕ್ಷವಹಿಸಿದನು. ಅವಳು ಆತನನ್ನು ಎಷ್ಟು ಪ್ರೀತಿಸುತ್ತಿದ್ದಳೆಂದರೆ ಅವಳಿಗೆ ಉತ್ತಮವಾದ್ದು ಯಾವದೂ ಇರಲಿಲ್ಲ.[7]

ಉಪ್ಪು ರಹಿತ "ಪಥ್ಯದ ಮೇಲಿರುವವರು ಉಪ್ಪನ್ನು ಸೇರಿಸದೇ ಊಟ ರುಚಿಯನ್ನು ಹೆಚ್ಚಿಸಿಕೊಳ್ಳಲು ಹರಸಾಹ ಪಡುತ್ತಿರುತ್ತಾರೆ. ಉಪ್ಪಿನ ಬದಲಾಗಿ ಇರುವದು ಇದಕ್ಕೆ ಸಹಾಯಿಸಬಹುದು ಆದರೆ ಒಂದು ಚಿಟಕೆ ಉಪ್ಪನ್ನು ಸೇರಿಸುವುದರ" ಪರಿಣಾಮವನ್ನು ಅದು ಬೀರದು.

"ನೀವು ಭೂಮಿಗೆ ಉಪ್ಪಾಗಿದ್ದೀರಿ" ಮತ್ತು ಉಪ್ಪು ರುಚಿಯನ್ನು ಹೆಚ್ಚಿಸುವುದಾಗಿದೆ ಇದು ಭೂಮಿಯ ಬಗೆಗೆ ಏನನ್ನು ಹೇಳುವುದಾಗಿದೆ? ಈ ಭೂಮಿಯು ಅಸಹ್ಯವಾದದ್ದು, ಈ ಜಗತ್ತಿನಲ್ಲಿ ಬಹು ದಿನಗಳವರೆಗೆ ಸಾಗುವ ಪ್ರತಿಯೊಂದು ಸಂಗತಿಯು ಸಪ್ಪೆಯಾಗಿರುವ ಅಂತ್ಯವನ್ನು ಕಾಣುವವುಗಳು ಆಗಿವೆ ಎಂದು ಇದು ಹೇಳುತ್ತದೆ.[8] ಕ್ರೈಸ್ತನಾದ ನಿನ್ನ ಬಗ್ಗೆ ಇದು ಏನನ್ನು ಹೇಳುತ್ತದೆ? ನೀನು ಜೀವಿತಕ್ಕೆ ಮಾಧುರ್ಯವನ್ನು ಕೊಡುವವನಾಗಿದ್ದೀ ಎಂದು ಇದು ಹೇಳುತ್ತದೆ. ನಿನ್ನನ್ನು ನೀನು ಅಲ್ಪವಾದುದಕ್ಕೆ ಮಾರಿಕೊಳ್ಳಬೇಡ.

## ಉಪ್ಪು ಬಹುಪಯೋಗಿ ವಸ್ತು ಆಗಿದೆ

ಉಪ್ಪಿನ ಮಹತ್ವದ ಬಗೆಗೆ ಹೆಚ್ಚಿನ ಸಂಗತಿಗಳು ಹೇಳಲ್ಪಟ್ಟಿವೆ. ಉದಾಹರಣೆಗೆ, ಉಪ್ಪು ನೀರಡಿಕೆಯನ್ನು ಹುಟ್ಟಿಸುತ್ತದೆ. "ನೀನು ಕುದುರೆಯನ್ನು ನೀರಿನೆಡೆಗೆ ಕರೆದೊಯ್ಯಬಹುದು ಆದರೆ ಅದಕ್ಕೆ ನೀರನ್ನು ಕುಡಿಯುವ ಹಾಗೆ ಮಾಡಲಾರೆ" ಎಂಬ ಹೇಳಿಕೆಯನ್ನು ನೀನು ಬಹುಶ ಕೇಳಿರಬಹುದು.[9] ಈ ಹೇಳಿಕೆಗೆ "... ಅದಕ್ಕೆ ನೀನು ಉಪ್ಪನ್ನು ತಿನ್ನಿಸಿದಾಗ ಎಂಬ ಜೋಡಣೆಯನ್ನು ಜೋಡಿಸುವ ಅವಶ್ಯಕತೆಯು ಇದೆ." ನಾನು ಬಾಲಕನಾಗಿದ್ದಾಗ ಜಾತ್ರೆಯಲ್ಲಿ ಪ್ರಾಣಿಗಳನ್ನು ಪ್ರದರ್ಶಿಸುವಾಗ ಖಚಿತ್ತಾಗಿ ನಾನು ಹೀಗೆ ಮಾಡುವವನಾಗಿದ್ದೆನು. ನನ್ನ ಒಂದು ಪ್ರದರ್ಶನದಲ್ಲಿ ಪ್ರಾಣಿಗಳು ನರಪೇತಲಾಗಿ ಕಂಡುಬಂದಿದ್ದಾದರೆ, ನಾನು ಸ್ವಲ್ಪ ಉಪ್ಪನ್ನು ಅದರ ಆಹಾರದಲ್ಲಿ ಹಾಕುತ್ತಿದ್ದನು. ಇದು ಅದಕ್ಕೆ ಹೆಚ್ಚು ನೀರನ್ನು ಕುಡಿಯಲು ಮತ್ತು ಪುಷ್ಟಿಯಾಗಿ ಕಾಣಲು ಸಹಾಯಿಸುತ್ತದೆ. ಇದು ನಮಗೂ ಅನ್ವಯಿಸುವುದಾಗಿದೆ: ನಾವು ನಡೆಸುವ ಜೀವಿತದ ಮೂಲಕ ಕ್ರೈಸ್ತರಾದ ನಾವು ನೀರಿಗಾಗಿನ ನೀರಡಿಕೆಯನ್ನು ಸೃಷ್ಟಿಸಬಹುದಾಗಿದೆ (ಯೋಹಾನ 4:10-15).

ಅರ್ಪಿಸುವಿಕೆಯಲ್ಲಿಯೂ ಸೇರಿಸಲ್ಪಟ್ಟಿತು (ಯಾಜಕಕಾಂಡ 2:13). ಇವೆಲ್ಲಗಳೂ ಕ್ರೈಸ್ತರ ಮೌಲ್ಯವನ್ನು ತಿಳಿಸುವವುಗಳು ಆಗಿವೆ.

**ಉಪ್ಪು ರಕ್ಷಣಾ ಸಾಧಕವೂ ಆಗಿದೆ**

ಬೈಬಲಿನ ಸಮಯದಲ್ಲಿ ಉಪ್ಪಿನ ಬಳಿಕೆಯ ಪ್ರಮುಖ ಉಪಯೋಗವು ಮತ್ತು ಇದರ ಶ್ರೇಷ್ಟ ಮೌಲ್ಯ ಎಂದರೆ ಇದು ಆಹಾರ ಪದಾರ್ಥಗಳನ್ನು ಕೆಡದಂತೆ ಉಳಿಸಲು ಬಳಸಲ್ಪಡವುದು ಆಗಿರಬಹುದು. ಆ ದಿನಗಳಲ್ಲಿ, ನಿಮಗೆ ಪಟ್ಟಣಕ್ಕೆ ಹೋಗುವುದಕ್ಕೆ ಆಗುತ್ತಿರಲಿಲ್ಲ, ಮತ್ತು ಮಾಂಸವನ್ನು ತಣ್ಣಗೆ ಮತ್ತು ತಾಜಾ ಆಗಿ ಇರಿಸಲು ಫ್ರಿಡ್ಜನ್ನು ಅಥವಾ ಫ್ರೀಜರ್ ಇರುತ್ತಿರಲಿಲ್ಲ. ತಾಜಾ ಮಾಂಸವು ಬೇಗನೇ ಕೆಟ್ಟುಹೋಗುತ್ತದೆ; ಅದು ಮಾಂಸದ ಸ್ವಭಾವ.[10]

ನಾನು ಬೆಳೆಯುತ್ತಿರುವಾಗ, ನನಗೆ ನೆನಪಿರುವಂತೆ ನಾವೆಲ್ಲ ನನ್ನ ಕುಟುಂಬದೊಂದಿಗೆ ರಜೆಗಾಗಿ ಹೋದೆವು. (ನಾವು ಖಚಿತ್ತಾಗಿ ಸಂಬಂಧಿಕರನ್ನು ಭೇಟಿ ಮಾಡುತ್ತಿದ್ದೆವು, ಆದರೆ ಅದನ್ನು ನಾವು ರಜೆ ಎಂದು ಪರಿಗಣಿಸುತ್ತಿರಲಿಲ್ಲ.) ಈ ಪ್ರಯಾಣದಲ್ಲಿ, ನಾವು ಕಾರಿನಲ್ಲಿ ಪೂರ್ವದಿಕ್ಕಿನತ್ತ ಮುಖಮಾಡಿರುವ ಪೂರ್ವ ಓಕ್ಲಾಹೋಮ ಮತ್ತು ಆರ್ಕಾನ್ಸಾದ ಭಾಗಗಳಿಗೆ ಹೊರಟೆವು. ನಾವು ಅಲ್ಲಿಂದ ಹೊರಟಾಗ, ಗ್ಯಾಸ್ ಕಂಪನಿಯವರು ಗ್ಯಾಸ್ ಲೈನ್‌ಗೆ ಅನಿಲ ಪೂರೈಕೆಯನ್ನು ನಿಲ್ಲಿಸಿದ್ದರು, ಆದರೆ ನಮ್ಮ ಹತ್ತಿರ ಗ್ಯಾಸ್ ರೆಫ್ರಿಜರೇಟರ ಇತ್ತು. ನಾವು ಮನೆಗೆ ಹೋದಾಗ, ಒಂದು ರೆಫ್ರಿಜರೇಟರ್ ನಲ್ಲಿ ತುಂಬಾ ಕೊಳತುಹೋದ ಮಾಂಸವು ನಮಗೆ ಸಿಕ್ತಿತು. ನಮ್ಮ ತಾಯಿಯು ರೆಫ್ರಿಜರೇಟನಿಂದ ಆ ವಾಸನೆಯನ್ನು ಹೋಗ ಲಾಡಿಸಲು ಪ್ರತಿಯೊಂದನ್ನೂ ಮಾಡಿದಳು. ಅದರ ವಾಸನೆಯನ್ನು ಹೋಗಲಾಡಿಸಲು ಅದರ ಬಾಗಿಲನ್ನು ತೆರೆದು ಹಿಂದಿನ ಭಾಗದಲ್ಲಿ ಕೆಲವಾರಗಳವರೆಗೆ ಇಟ್ಟಳು. ಆದರೂ ಅದರಲ್ಲಿನ ವಸ್ತುಗಳನ್ನು ತೆಗೆಯುವಾಗಲೆಲ್ಲಾ ವಿಲಕ್ಷಣವಾದ ಮತ್ತು ತೀಕ್ಷವಾದ ವಾಸನೆಯು ಬರುತ್ತಲೇ ಇತ್ತು.

ನನ್ನೊಬ್ಬ ಸ್ನೇಹಿತನಿಗೆ ಗ್ಯಾರೆ ಎಂಬ ಚಿಕ್ಕ ಮಗನಿದ್ದನು. ಒಂದು ಸಾರಿ ಆತನು ಮನೆಯಲ್ಲಿ ಒಬ್ಬನೇ ಇದ್ದಾಗ, ಟುನಾ ಸ್ಯಾಂಡವಿಚ್ ಮಾಡಿಕೊಳ್ಳಲು ನಿರ್ಧರಿಸಿದನು. ಆತನು ಕ್ಯಾನನ್ನು ತೆರೆದಾಗ ಜಮಖಾನಿನ ಮೇಲೆ ಟುನಾ ಮತ್ತು ಎಣ್ಣೆಗಳೆರಡೂ ನೆಲದ ಮೇಲೆ ಬಿದ್ದಿತು. ತಾನು ಮಾಡಿದ್ದು ತನ್ನ ತಂದೆತಾಯಿಗಳಿಗೆ ತಿಳಿಯಬಾದು ಎಂಬುದು ಯೋಚಿಸಿ ಆತನು ಶೌಚಗೃಹದಿಂದ ವ್ಯಾಕೂಮ್ ಕ್ಲೀನರ್‌ನ್ನು ತಂದನು ಮತ್ತು ಟುನಾವನ್ನು ವ್ಯಕೂಮ ಮಾಡಿದನು. ನಂತರ ಆತನು ಅದನ್ನು ಶೌಚಗೃಹದಲ್ಲಿ ಇಟ್ಟನು. ದಿನಗಳು ಕಳೆದಂತೆ, ನಿಗೂಢವಾದ ಮತ್ತು ವಿಕೃತವಾದ ವಾಸನೆಯು ಮನೆಯೆಲ್ಲಾ ತುಂಬಿತು ಅಂತೂ ಅದರ ಮೂಲವು ಸಿಕ್ಕಿತು.

ಮಾಂಸವು ಬೇಗನೇ ಕೊಳೆತುಹೋಗುವದರ ಬಗೆಗೆ ಮಾತನಾಡಿದ್ದು ನಾನು ಹೇಳಿದ್ದು ಈಗ ನಿಮಗೆ ತಿಳಿಯತೇ. ಮಾಂಸವು ವಿಶೇಷ ಸಿದ್ಧತೆಯಿಲ್ಲದೇ ತಾಜಾ ಆಗಿ ಉಳಿಯದು.

ಬೈಬಲ್ ಸಮದಲ್ಲಿ ಮಾಂಸವನ್ನು ತಾಜಾ ಆಗಿ ಉಳಿಸಲು ಏನು ಮಾಡುತ್ತಿದ್ದರು? ಅವರು ಅದರ ಮೇಲೆ ಉಪ್ಪನ್ನು ಸವರುತ್ತಿದ್ದರು. ಮೀನುಗಾರರು ತಮ್ಮ ಮೀನುಗಳನ್ನು ಉಪ್ಪಿನಲ್ಲಿ ಇಡುತ್ತಿದ್ದರು. ಜನರು ಉಪ್ಪಿನ ರುಚಿಯನ್ನು ಬಹುವಾಗಿ ಪ್ರೀತಿಸುತ್ತಾರೆ ಎಂದಲ್ಲ ಬದಲಾಗಿ ಮಾಂಸವು ಕೆಟ್ಟುಹೋಗಬಾರದು ಎಂಬ ಉದ್ದೇಶದಿಂದ ಅವರು ಉಪ್ಪನ್ನು ಬಳಸುತ್ತಾರೆ.[11] ನಿಮ್ಮಲ್ಲಿ ಕೆಲವರು ನಿಮ್ಮದೇ ಆದ ಮಾಂಸ ಕತ್ತರಿಸುವಿಕೆಯನ್ನೂ, ಉಪ್ಪಿನಿಂದ ಕೆಂಪು ಮಾಂಸವನ್ನು ಸರಿಪಡಿಸುವಿಕೆಯನ್ನೂ ಅಥವಾ ಪೋರ್ಕಿಗೆ ಉಪ್ಪು ಹಾಕಿ ಕೆಡುವುದರಿಂದ ತಪ್ಪಿಸುವವರಾಗಿರುತ್ತೀರಿ.[12]

"ನೀವು ಭೂಮಿಗೆ ಉಪ್ಪಾಗಿದ್ದೀರಿ" ಮತ್ತು ಉಪ್ಪು ಸಂರಕ್ಷಕವಾಗಿದೆ. ಇದು ಭೂಮಿಯ ಬಗೆಗೆ ಏನನ್ನು ಹೇಳುತ್ತದೆ? ಈ ಭೂಮಿಯು ಕೊಳೆತುಹೋಗುತ್ತಿದೆ, ಕೊಳೆತು ನಾರುತ್ತಿದೆ,

ಕೆಲಸಕ್ಕೆ ಬಾರದಂತಿದೆ. ಭೂಮಿಯ ಬಗೆಗೆ ಇದು ನಮ್ಮ ಮೂಲ ಅರಿತುಕೊಳ್ಳುವಿಕೆ ಆಗಿದೆ. ಇದು ನೋಡಲು ಸುಂದರವಾಗಿ ಕಾಣಬಹುದು ಎಂದಲ್ಲ, ಇದು ಕಣ್ಣ ಮುಂದೆ ನಿಜವಾಗಿಯೂ ಸಾಯುತ್ತಿದೆ ಮತ್ತು ಶಿಥಿಲಗೊಳ್ಳುತ್ತಿದೆ. ಈ ಜಗತ್ತು ಸುಂದರ ಮುಖವನ್ನು ಹೊಂದಿದೆ; ಆದರೆ ಅದನ್ನು ಹತ್ತಿರದಿಂದ ನೀನು ನೋಡಿದ್ದಾದರೆ, ಎಲ್ಲವೂ ಬಣ್ಣಮತ್ತು ಹುಡಿಯಿಂದಾದುದು ಆಗಿದೆ. ಅಡಿಪಾಯದಲ್ಲಿನ ಬಣ್ಣಗಳು ಮಾಸಿಹೋಗಿವೆ, ಸುಕ್ಕುಗಳೇ ನಿಶ್ಚಿತವಾದವುಗಳು ಆಗಿವೆ.

ಈ ಸತ್ಯವು ಸತ್ಯವೇದಿಯ ಬೋಧನೆಯ ಬಗೆಗೆ ಅಲ್ಪ ಜ್ಞಾನವನ್ನು ಹೊಂದಿದ ಪ್ರತಿಯೊಬ್ಬರೊಂದಿಗೂ ಕೂಡಲೇ ಪ್ರಕಟವಾಗುವುದಾಗಿದೆ. ಇಲ್ಲಿ ಅಂಕಿ ಸಂಖ್ಯೆಯು ಅನವಶ್ಯ.[13] ನೀವು ಜಗತ್ತಿನ ನೈತಿಕ ಶ್ರೇಣಿಯ ಒಳ್ಳೆಯ ದಿನಗಳೆಡೆಗೆ, ನಿಯತ್ತು ಮತ್ತು ಪ್ರಾಮಾಣಿಕತೆಗಳ ಅಲ್ಪ ಆಯುವನ್ನು ಮತ್ತು ಆತ್ಮೀಕ ವಿಷಯಗಳ ಬಗೆಗಿನ ಆಸಕ್ತಿಯ ಕೊರತೆಯನ್ನು ನೀವು ನೋಡಬಹುದು. ಈ ಜಗತ್ತಿನ ಬಗೆಗಿನ ಯಾವದೂ ಅಡಿಯಲ್ಲಿನ ಬಾಹ್ಯರೂಪವನ್ನು ನೋಡುವ ಯಾರನ್ನು ಆಕರ್ಷಿಸದು.

ಇದಕ್ಕೆ ಹೋಲಿಕೆಯಾಗಿ, ಕ್ರೈಸ್ತರ ಬಗೆಗೆ ಏನನ್ನು ಇದು ಹೇಳುತ್ತದೆ? ಕ್ರೈಸ್ತರು ಭೂಮಿಯ ಶಕ್ತಿಯನ್ನು ಸಂರಕ್ಷಿಸುವವರು ಎಂದು ಇದು ಹೇಳುತ್ತದೆ.

ನನ್ನ ಜೀವಿತದುದ್ದಕ್ಕೂ, ವಿಜ್ಞಾನ, ಶಿಕ್ಷಣ, ಮಾನಶಾಸ್ತ್ರ ಮತ್ತು ವಿಶ್ಲೇಷಣೆ, ತಂತ್ರಜ್ಞಾನ, ಉತ್ತಮ ಜೀವಿತದ ಸ್ಥಿತಿಗಳು, ಶಾಸನಗಳು, ಸಾಮಾಜಿಕ ಸುಧಾರಣೆ ಮತ್ತು ಸೇನೆಯ ಬಲ ಹೀಗೆ ಇವು ಈ ಜಗತ್ತಿನ ನಿರೀಕ್ಷೆ ಮತ್ತು ರಕ್ಷಣೆಯಂತಹ ಹಲವಾರು ವಿಧದ ಕೂಗನ್ನು ನಾನು ನೋಡಿದ್ದೇನೆ. ಮನುಕುಲವು ಈ ಎಲ್ಲಾ ಕ್ಷೇತ್ರಗಳಲ್ಲಿ ಪ್ರಗತಿಯನ್ನು ಸಾಧಿಸಿದೆ, ಕೆಲವುಗಳಲ್ಲಿ ಮಹತ್ವದ ಪ್ರಗತಿಯಲ್ಲಿದೆ ಹೀಗೆ ಜಗತ್ತು ಕೆಟ್ಟದರೆಡೆಗೆ ಬೆಳೆಯುತ್ತಿರುವಂತೆ ಕಾಣುತ್ತದೆ. ಜಗತ್ತಿಗಾಗಿ ಇರುವ ಒಂದೇ ನೈಜ ನಿರೀಕ್ಷೆ ಎಂದರೆ *ನಂಬಿಗಸ್ತರಾದ ಕ್ರೈಸ್ತರು* ಎಂದು ಯೇಸು ಹೇಳುತ್ತಾನೆ.

ಅಲ್ಪವಾದ ಚಿಟಿಕೆ ಉಪ್ಪು ಮಾಂಸದ ದೊಡ್ಡ ತುಂಡನ್ನು ರಕ್ಷಿಸುವುದಾದರೆ, ಕೆಲವು ಸಮರ್ಪಿಸಿಲ್ಪಟ್ಟ ಕ್ರೈಸ್ತರು ಸಮಾಜವನ್ನೇ ರಕ್ಷಿಸಬಲ್ಲರು, ಅಬ್ರಹಾಮ ಮತ್ತು ಸೂದೋಮ ಗೋಮೋರದ ನಾಶನದ ಕಥೆಯು ನಿಮಗೆ ನೆನೆಪಿರಬಹುದಲ್ಲ (ಆದಿಕಾಂಡ 18)? ಹತ್ತು - ಕೇವಲ ಹತ್ತು - ನೀತಿವಂತ ಜನರು ಆಪಟ್ಟಣಗಳನ್ನು ಸಂರಕ್ಷಿಸಬಹುದಿತ್ತು (ವಚನ 32) "ನೀವು ಸಾಧಿಸಿದ್ದು ಅದ್ಭುತವಾದದ್ದು ಆದೆರೇ ಈ ಎರಡೂ ಪಟ್ಟಣಗಳು ಮುಂದಿನದಿನಗಳಲ್ಲಿ ಕಾಣಬೇಕಾಗಿದ್ದಾದರೆ, ಹತ್ತು ಗುಂಪುಗಳಲ್ಲಿ ಒಳ್ಳೆಯ ನಡೆತೆಯನ್ನು ಇಟ್ಟುಕೊಳ್ಳಬೇಕಾಗಿದ್ದಾದರೆ ನೀವು ಬೆಟ್ಟದ ಮೇಲೆ ವಾಸಿಸುತ್ತಿರುವ ವೃದ್ಧ ಅಬ್ರಹಾಮನಂತೆ ಆಗಬೇಕು" ಕೆಲವರು ಸೋದೋಮ್ ಗೋಮೋರಿನ ವಾಣಿಜ್ಯ ಮಂಡಳಿಗೆ ಹೋಗುವವರು ಹೀಗೆ ಹೇಳುವುದನ್ನು ಊಹಿಸಿಕೊಳ್ಳಿರಿ.[14] ಅವರು ಹೇಗೆ ಪ್ರತಿಕ್ರಯಿಸಬಹುದು? ಅವರ ಮನೋಭಾವನೆಯನ್ನು ಹೇಗೆ ಇರಲಿ, ಅಬ್ರಹಾಮನಂತಹ ಹತ್ತು ಜನರು ಆ ಪಟ್ಟಣಗಳನ್ನು ಸಂರಕ್ಷಿಸಲ್ಪಡವರು.

ನಾವು ಈಗ ವ್ಯತ್ಯಾಸವನ್ನು ಯೋಚಿಸೋಣ. ಬೆಳಕು (ನಮ್ಮ ಮುಂದಿನ ಪಾಠದಲ್ಲಿ ಮಾತನಾಡಲಿರುವುದರ ಬಗೆಗೆ) ತಾನು ಮಾಡುವ ಕಾರ್ಯದ ಮೇಲೆ ಪ್ರಭಾವವನ್ನು ಬೀರುವುದಾದರೆ, ಉಪ್ಪು ತಾನು ಏನಾಗಿದ್ದೇನೆ ಎಂಬುದರಿಂದ ಪ್ರಭಾವ ಬೀರುವುದಾಗಿದೆ. ನಾವು ವಿವರಿಸುತ್ತಿರುವ ಸಣ್ಣ ಪ್ರಮಾಣದ ಸಂರಕ್ಷಣಾ ಗುಣದ ಮೇಲೆ ನೀವು ಅಲ್ಪಮಟ್ಟಿಗೆ ನೀವು ನೋಡಿರಬಹುದು. ನೀನು ದೇವರ ನಂಬಿಗಸ್ತ ಮಗುವಾಗಿದ್ದೀ ಎಂದು ನಾವು ಹೇಳ ಬಹುದು (ಮತ್ತು ನೀವು ಆಗಿದ್ದೀರಿ ಎಂದು ನಾನು ನೆನಿಸುತ್ತೇನೆ). ನೀವು ನಿಮ್ಮ ಕ್ರೈಸ್ತತ್ವವನ್ನು ಪ್ರದರ್ಶಿಸದಿರಿ, ಆದರೆ ನೀವು ಯಾರಾಗಿದ್ದೀರಿ ಮತ್ತು ಯಾವುದಕ್ಕಾಗಿ ನಿಂತುಕೊಳ್ಳುವವ ರಾಗಿದ್ದೀರಿ ಎಂದು ಜನರು ಬಲ್ಲವರಾಗಿದ್ದಾರೆ. ನೀನು ಕೋಣೆಯಲ್ಲಿ ನಡೆಯುವಾಗ, ಅಲ್ಲಿ

ಭಾಷೆ ಮತ್ತು ನಗೆಚಾಟಿಕೆಗಳು ಮುಕ್ತವಾಗಿರುವದು ಅಸಹ್ಯವಾದುದ್ದು ಅಲ್ಲ. "ಆತನ ಹೆಸರು ಇಲ್ಲಿರುವುದರಿಂದ ನಮಗೆ ಕಥೆಯನ್ನು ಹೇಳಲಿಕ್ಕಾಗದು" ಎಂದು ಜನರು ನಿನ್ನನ್ನು ಮುಜುಗರಕ್ಕೀಡು ಮಾಡಬಹುದು! ನಿನ್ನ ಉಪಸ್ಥಿತಿಯು ಕೇವಲ ನಿನ್ನ ಇರುವಿಕೆಯ ನಿಜಾಂಶವು ದೊಡ್ಡ ಬದಲಾವಣೆ ಮಾಡಲು ಸಾಧ್ಯ. ಉಪ್ಪು ತಾನೇನಾಗಿದೆ ಎಂಬುದರ ಪ್ರಭಾವವನ್ನು ಬೀರುವುದಾಗಿದೆ.

ಯೇಸು ಇದನ್ನು "ಸಾಮಾನ್ಯ" ಜನರು ಎಂದು ಜಗತ್ತು ಪರಿಗಣಿಸಿರುವಂಥವರಿಗಾಗಿ ಹೇಳಿದ್ದಾನೆ ಎಂಬುದನ್ನು ನಾನು ತಿರುಗಿ ಒತ್ತಿಹೇಳುವವನಾಗಿ. "ನೀವು ಭೂಮಿಗೆ ಉಪ್ಪಾಗಿದ್ದೀರಿ," ಎಂದು ಯೇಸು ಹೇಳಿದ್ದಲ್ಲಿ ಮೂಲಭಾಷೆಯಲ್ಲಿ, "ನೀವು" ಎಂಬ ಪದವು ಒತ್ತಿಹೇಳಲ್ಪಟ್ಟಿದೆ,[15] ಆತನ ಹೇಳಿಕೆಯು ಸಮಗ್ರವಾದುದು ಮತ್ತು ಅನನ್ಯವಾದುದು ಆಗಿದೆ, ಇದು ಆತನ ಹಿಂಬಾಲಕರನ್ನು ಒಳಗೊಂಡಿದೆ ಮತ್ತು ಆತನ ಹಿಂಬಾಲಕರನ್ನು ಹೊರತುಪಡಿಸಿ ಇರುವ ಪ್ರತಿಯೊಬ್ಬನು ಇತರರನ್ನು ಪ್ರತಿಬಂಧಿಸುವುದನ್ನು ಮಾಡುತ್ತದೆ, ಯೇಸು ಇದನ್ನು ತನ್ನ ಸಮಯದ ಧಾರ್ಮಿಕ, ಆರ್ಥಿಕ, ಸಾಮಾಜಿಕ, ಅಥವಾ ರಾಜಕೀಯ ನಾಯಕರಿಗೆ ಹೇಳಲಿಲ್ಲ. ಆದರೆ ಆತನನ್ನು ಹಿಂಬಾಲಿಸಲು ಸಿದ್ಧವಿರುವ ಭೂವಿಗೆ ಉಪ್ಪಾಗಿರುವ ಸಾಮಾನ್ಯ ಜನರಿಗೆ ಇದನ್ನು ಹೇಳಿದನು,

ನಿನ್ನನ್ನು ನೀನು ಅಲ್ಪವಾದುದಕ್ಕೆ ಮಾರಿಕೊಳ್ಳಬೇಡ, ನೀನು ವಿಶೇಷವಾಗಿದ್ದಿ ಬಲು ವಿಶೇಷವಾಗಿದ್ದಿ!

## ಒಂದು ಸವಾಲು

"ನೀವು ಭೂಮಿಗೆ ಉಪ್ಪಾಗಿದ್ದೀರಿ" ಎಂದು ಯೇಸು ಹೇಳುವಾಗ ಇದೊಂದು ಕೇವಲ ಪ್ರಶಂಸೆಯಲ್ಲ, ಬದಲಾಗಿ ಇದು ಒಂದು ಸವಾಲು ಕೂಡಾ ಆಗಿದೆ, ಉಪ್ಪು ಮೌಲ್ಯವನ್ನು ಹೊಂದಿದ್ದು ಕೆಡದಂತೆ ಉಳಿಸುವ ಶಕ್ತಿಯನ್ನು ಹೊಂದಿದೆ ಯಾಕೆಂದರೆ ಇದು ಇದರ ವಿಶೇಷತೆ ಆಗಿದೆ, ಈ ಗುಣವನ್ನು ವ್ಯಕ್ತಪಡಿಸುವ ಒಂದು ಮಾರ್ಗವು ಕ್ರೈಸ್ತರಾದ ನಾವು ವಿಶಿಷ್ಟವಾದ ಗುಣಲಕ್ಷಣವನ್ನು ಹೊಂದುವ ಅವಷ್ಯಕತೆಯು ಇದೆ ಎಂಬುದೇ ಆಗಿದೆ,

> ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕಭಾವದವರಾಗಿರ್ರಿ ... (ರೋಮಾಪುರ 12:2).
>
> ... ಇಹಲೋಕದ ಸ್ನೇಹವು ದೇವವೈರವೆಂದು ನಿಮಗೆ ತಿಳಿಯದೋ? ಲೋಕಕ್ಕೆ ಸ್ನೇಹಿತ ನಾಗಬೇಕಂದಿರುವವನು ತನ್ನನ್ನು ದೇವರಿಗೆ ವಿರೋಧಿಯನ್ನಾಗಿ ಮಾಡಿಕೊಳ್ಳುತ್ತಾನೆ (ಯಾಕೋಬ 4:4).
>
> ಲೋಕವನ್ನಾಗಲಿ ಲೋಕದಲ್ಲಿರುವವುಗಳನ್ನಾಗಲಿ ಪ್ರೀತಿಸಬೇಡಿರಿ, ಯಾವನಾದರೂ ಲೋಕವನ್ನು ಪ್ರೀತಿಸಿದರೆ ತಂದೆಯ ಮೇಲಣ ಪ್ರೀತಿಯು ಅವನಲ್ಲಿಲ್ಲ (1 ಯೋಹಾನ 2:15).

ಉಪ್ಪು, ಮಾಂಸವು ಹೊಂದಿದಂತಹ ಅದೇ ರೀತಿಯ ಗುಣವನ್ನು ಹೊಂದಿದ್ದಾರೆ, ಅದು ಮಾಂಸವನ್ನು ಕೆಡದಂತೆ ರಕ್ಷಿಸುವ ಗುಣವನ್ನು ಹೊಂದಿರಲಾರೆವು, ನಾವು ವಿಭಿನ್ನ ರಾಗಿರಬೇಕೆಂದು[16] ಇದರರ್ಥವಲ್ಲ, ಆದರೆ ನಾವು ವಿಷೇಶವಾಗಿದ್ದೇವೆ ಎಂಬುದು ಇದರ ಅರ್ಥವಾಗಿದೆ.

ನಾವು ಏನನ್ನು ಮಾಡುತ್ತೇವೆ, ನಾವು ಏನನ್ನು ಧರಿಸುತ್ತೇವೇ, ನಾವು ಏನನ್ನು ಮಾತನಾಡುತ್ತೇವೆ, ನಾವು ಸಂಧಿಗ್ಧತೆಯನ್ನು ಎದುರಿಸುವುದ ರೀತಿಯ ಮೂಲಕ ನಾವು ಕೈಸ್ತರು ಎಂದು ಜನರು ನಮ್ಮಡೆಗೆ ದೃಷ್ಟಿಸುವರೆ ಮತ್ತು ನೋಡುವರೇ? ಕ್ರೈಸ್ತರಾಗಿರುವುದರ

ಮೂಲಕ ನಾವು ನಮ್ಮ ಕುಟುಂಬವನ್ನು ಹೇಗೆ ನಡೆಸುತ್ತೇವೆ, ಅಂಗಡಿಯವರೊಡನೆ ಹೇಗೆ ನಡಕೊಳ್ಳುತ್ತೇವೆ, ನಾವು ನಮ್ಮ ಆಟವನ್ನು ಹೇಗೆ ಆಡುತ್ತೇವೆ ಎಂಬುದು ಪ್ರಭಾವ ಬೀರುವುದಾಗಿದೆ.

ಗಮನಿಸಿ ಯೇಸು "ನೀವು ಚರ್ಚಿಗೆ ಉಪ್ಪಾಗಿದ್ದೀರಿ" ಎಂದು ಹೇಳಲಿಲ್ಲ, ಅದರ ಬದಲಾಗಿ "ನೀವು ಭೂಮಿಗೆ ಉಪ್ಪಾಗಿದ್ದೀರಿ" ಎಂದು ಹೇಳಿದನು. ಚರ್ಚಿನ ಕಟ್ಟಡದಲ್ಲಿ ಕಾರ್ಯಗಳು ನಡೆಯುತ್ತಿವೆ ಎಂದು ಕಂಬಗಳು ಸೂಚಿಸುವವುಗಳು ಆಗಿವೆ. ಪೇಟೆ ಸ್ಥಳದಲ್ಲಿ, ಶಾಲಾಕೊಠಡಿಯಲ್ಲಿ ಹೀಗೆ ಇತರ ಜನರು ಎಲ್ಲಿರುತ್ತಾರೋ ಅಲ್ಲಿ "ಉಪ್ಪಾಗಿರುವದು" ನಮಗೆ ಅವಶ್ಯವಿದೆ. ಯೇಸು ಪಾಪಿಗಳ ಸ್ನೇಹಿತನಾಗಿದ್ದಾನೆ (ಮತ್ತಾಯ 11:19). *Out of the Salt Shaker & into the World*[17] ಎಂಬ ಪುಸ್ತಕವು ಇತರರ ಮೇಲೆ ಸಕಾರಾತ್ಮಕ ಪ್ರಭಾವವನ್ನು ಹೊಂದುವುದನ್ನು ಕ್ರೈಸ್ತರು ಸಮಾಜದಲ್ಲಿ ಕಂಡುಕೊಳ್ಳುವವರಾಗಿದ್ದಾರೆ ಎಂದು ಪ್ರೇರೇಪಿಸುವುದಾಗಿದೆ.

ನೀನು ಎಲ್ಲಿ ಹೋಗುತ್ತೀಯೋ, ಎಲ್ಲಿ ಇರುತ್ತೀಯೋ ಅಲ್ಲೆಲ್ಲಾ ನೀನು ದೇವರ ಶಕ್ತಿಯನ್ನು ಸಂರಕ್ಷಿಸಲು ನಿಯೋಜಿಸಲ್ಪಟ್ಟಿದ್ದಿ. ಬಹುಶ ನೀನು ಮನೆಗಳಿಗೆ ಭೇಟಿ ಕೊಟ್ಟಾಗ, ಸ್ಥಳಗಳಿಗೆ ಹೋಗುವಾಗ ಮತ್ತು ಸಂಪರ್ಕಗಳನ್ನು ಮಾಡಿಕೊಳ್ಳುವಾ ದೇವರ ಮಗುವಾದಂತಹ ನೀನು ಅಪೂರ್ವನಾಗಿದ್ದೀ. ಅದು ನಿನಗಾಗಿ ದೇವರಲ್ಲಿನ ವಿಶೇಷ ಸ್ಥಳವಾಗಿದೆ, ಪ್ರಭಾವ ಬೀರುವುದಕ್ಕಾಗಿನ ನಿನ್ನ ವಿಶೇಷ ಸ್ಥಳವಾಗಿದೆ. "ಭೂಮಿಗೆ ಉಪ್ಪಾಗಿರುವ" ಈ ಸವಾಲನ್ನು ಎಂದಿಗೂ ಮರೆಯದಿರು.

13ನೇಯ ವಚನದ ಕೊನೆಯ ಭಾಗದಲ್ಲಿ ಈ ಸವಾಲಿನ ಗಂಭೀರತೆಯನ್ನು ಯೇಸು ಒತ್ತಿ ಹೇಳಿದ್ದಾನೆ: "... ಉಪ್ಪು ಸಪ್ಪಗಾದರೆ ಅದಕ್ಕೆ ಇನ್ನಾತರಿಂದ ಉಪ್ಪಿನ ರುಚಿ ಬಂದೀತು? ಜನರು ಅದನ್ನು ಹೊರಗೆ ಹಾಕಿ ತುಳಿಯುವುದಕ್ಕೆ ಅದು ಯೋಗ್ಯವೇ ಹೊರತು ಮತ್ತಾವ ಕೆಲಸಕ್ಕೂ ಬಾರದು." KJVಯು ಉಪ್ಪು ತನ್ನ "ರಕ್ಷಕತ್ವವನ್ನು" ಕಳೆದುಕೊಳ್ಳುತ್ತದೆ ಎಂದು ಮಾತನಾಡುವುದಾಗಿದೆ. NIVಯಲ್ಲಿ "ಉಪ್ಪು ತನ್ನ ಕ್ಷಾರತನವನ್ನು ಕಳದುಕೊಂಡಿದ್ದಾದರೆ ಅದು ತಿರುಗಿ ಹೇಗೆ ಉಪ್ಪಿನ ರುಚಿಯನ್ನು ಹೊಂದಲು ಸಾಧ್ಯ" ಎಂದಿದೆ.

ನಾವು ಡಬ್ಬಿಯಲ್ಲಿನ ಶುದ್ಧವಾದ ಮತ್ತು ಬಿಳಿಯದಾದ ಉಪ್ಪನ್ನು ನಾವು ಕೊಳ್ಳುವದರಿಂದ ಉಪ್ಪು ತನ್ನ ರುಚಿಯನ್ನು ಮತ್ತು ಉಪ್ಪಿನಾಂಶವನ್ನು ಹೇಗೆ ಕಳಕೊಳ್ಳುವದು ಎಂದು ಅರ್ಥಮಾಡಿಕೊಳ್ಳುವಲ್ಲಿ ನಮ್ಮಲ್ಲಿ ಅನೇಕರು ಕ್ಲಿಷ್ಟತೆಯನ್ನು ಹೊಂದಿದ್ದಾರೆ. ಉಪ್ಪು ಯಾವಾಗಲೂ ಕ್ಷಾರಯುಕ್ತವಾಗಿರುವುದಾಗಿದೆ. ಒಂದು ವೇಳೆ ಒಂದೇ ಕ್ಷಣವೂ ಉಳಿದಿದ್ದಾರೂ ಕೂಡಾ ಅದೂ ಕೂಡಾ ಉಪ್ಪಾಗಿರುತ್ತದೆ. ಸತ್ಯವೇದದ ಸಮಯದಲ್ಲಿ ಉಪ್ಪು ಸಮುದ್ರದ ನೀರಿನ ಹಬೆಯಾಗುವಿಕೆಯ ಪರಿಣಾಮದಿಂದ ಆಗುವುದಾಗಿತ್ತು. ಆ ಉಪ್ಪು ಸ್ವಾಭಾವಿಕವಾಗಿ ಹೊಲಸನ್ನು ಒಳಗೊಂಡಿರುವುದಾಗಿತ್ತು. ಒಂದು ವೇಳೆ ಉಪ್ಪನ್ನು ನೆಲದ ಮೇಲಿಂದ ಕೆತ್ತಿ ತಗುದುಕೊಂಡಿದ್ದಾದರೆ ಸ್ವಲ್ಪ ಉಸುಕಪ ಅಥವಾ ಕೊಳೆಯುವ ತಪ್ಪದೇ ಉಪ್ಪಿನ ಜೊತೆ ಸೇರಿಕೊಂಡಿರುವುದಾಗಿತ್ತು. ಉಪ್ಪು ಸ್ವಾಭಾವಿಕವಾಗಿ ಹೊಲಸನ್ನು ಒಳಗೊಂಡಿರುವುದಾಗಿತ್ತು. ಒಂದು ವೇಳೆ ಉಪ್ಪನ್ನು ನೆಲದ ಮೇಲಿಂದ ಕೆತ್ತಿ ತೆಗೆದುಕೊಂಡಿದ್ದಾದರೆ, ಸ್ವಲ್ಪ ಉಸುಕು ಅಥವಾ ಕೊಳೆಯು ತಪ್ಪದೇ ಉಪ್ಪಿನ ಜೊತೆ ಸೇರಿಕೊಂಡಿರುವುದಾಗಿತ್ತು. ಉಪ್ಪುಮಯ ಸಂಗ್ರಹವು ವಸ್ತುಗಳಲ್ಲಿ ತೋರಿಬಂದಿದ್ದಾರೆ, ಹೆಚ್ಚಿನ ರೀತಿಯ ಸೋಡಿಯ ಕ್ಲೊರೈಡ್[18] ಸೋರಿಹೋಗುತ್ತದೆ. ಸಾರವಾಗಿ ಎಷ್ಟು ಉಳಿಯುತ್ತದೆಯೋ ಅಷ್ಟು ಉಪ್ಪು ಭೂಮಿಯನ್ನು ಸುಸ್ಥಿತಿಯಲ್ಲಿ ಇಡಲು ಸಾಕು, ಆದರೆ ಬೆಲೆಯುಳ್ಳದ್ದಾಗುವುದಕ್ಕಾಗಿ ಇದು ಸಾಕಷ್ಟಲ್ಲ. ಈ ಉಪ್ಪು ತನ್ನ ವೈಶಿಷ್ಟತೆಯನ್ನು ಕಳೆದುಕೊಂಡಿರುತ್ತದೆ.

ಪಾಲೇಸ್ತೀನಿನಲ್ಲಿ ಒಳ್ಳೆಯ ಭೂಮಿಯು ಇರುವುದಾಗಿತ್ತು. ಅಲ್ಲಿನ ಜನರು ಅಲ್ಲಿ ಸಿಕ್ಕುವ ಪ್ರತಿಯೊಂದು ಇಂಚನ್ನು ಧಾನ್ಯ ಬೆಳೆಯುವುದಕ್ಕಾಗಿ ಬಳಸಿದರು. ಒಂದರಲ್ಲಿ ಒಂದು

ಹಣೆದುಕೊಂಡ ಭೂಮಿಗಳ ಚಿಕ್ಕದಾರಿಗಳು ರೈತರಿಂದ ಉಪಯೋಗಿಸಲ್ಪಟ್ಟವು. ಅದರ "ಕ್ಷಾರಗುಣವು ಕಳೆದುಕೊಳ್ಳುವುದೆಂದು" ಜನರು ಉಪ್ಪನ್ನು ಚಲ್ಲುವ ಧೈರ್ಯ ಮಾಡಲಿಲ್ಲ, ಯಾಕೆಂದರೆ ಅದು ಮಣ್ಣಿನ ಫಲವತ್ತೆಯನ್ನು ನಾಶಮಾಡಿಬಿಡಬಹುದಿತ್ತು (ನಾನು ಮನೆಯಲ್ಲಿ ತಯಾರಾದ ಐಸ್ ಕ್ರೀಮಿನ ಶೀತಲೀಕರಣಕ್ಕೆ ಬಳಸಿದ ಉಪ್ಪಿನ ಐಸ್‌ನ್ನು ಮತ್ತು ನೀರನ್ನು ಲಾನ ಮೇಲೆ ಚಲ್ಲಿದಾಗ ಈ ಪಾಠವನ್ನು ನಾನು ಕಷ್ಟಮಯವಾಗಿ ಕಲಿತಿರುವೆ) ಬದಲಾಗಿ, ಅವರು ಕಾಲು ದಾರಿಗೆ ಒಡೆಯುವಿಕೆಯು ಬಾರದಿಲು ಉಪ್ಪಿನ ಗುಡ್ಡೆಯನ್ನು ಅದರ ಮೇಲೆ ಹಾಕುತ್ತಿದ್ದರು. ಅಲ್ಲಿ ಅದು "ಜನರ ಕಾಲುಗಳ ತುಳಿತಕ್ಕೆ ಒಳಗಾಗುತ್ತಿತ್ತು."

ಯೇಸುವಿನ ಈ ದೃಷ್ಟಾಂತವು "ಭೂಮಿಗೆ ಉಪ್ಪಾಗಿರುವ"ವಂತ ಆತನ ಸಂಭವ ನೀಯತೆಯನ್ನು ಅರಿತುಕೊಳ್ಳುವ ಯಾವ ಪ್ರಯತ್ನವನ್ನೂ ಮಾಡದ ಕ್ರೈಸ್ತರ ಮೇಲಿನ ದುಃಖದಾಯಕ ವಿಶ್ಲೇಷಣೆಯಾಗಿದೆ. ಆತನ ಕಠಿಣವಾದ ಸಮಾರೋಪ ಎಂದರೆ ಅಂಥ ವ್ಯಕ್ತಿಯು "ಯಾವ ಉಪಯೋಗಕ್ಕೂ ಬಾರದವನು" ಎಂದರು.

## ಮುಕ್ತಾಯ

ಉಪ್ಪು ಮತ್ತು ಬೆಳಕು: ಇವುಗಳು ಸಾಮಾನ್ಯವಾದ ವಸ್ತುಗಳು ಆಗಿದ್ದು ಅಮೂಲ್ಯವಾದ ಪಾಠವನ್ನು ಕಲಿಸಲು ಯೇಸುವಿನಿಂದ ಉಪಯೋಗಿಸಲ್ಪಟ್ಟವುಗಳು ಆಗಿವೆ. ನಾವು ಮುಂದಿನ ಪ್ರಸಂಗದ ಪಾಠದಲ್ಲಿ "ಬೆಳಕು" ಆಗಿ ಇರುವುದರ ಬಗೆಗೆ ಅಧ್ಯಯನ ಮಾಡೋಣ: ಒಂದು ಕ್ಷಣಕ್ಕಾಗಿ, "ನೀವು ಭೂಮಿಗೆ ಉಪ್ಪಾಗಿದ್ದೀರಿ" ಎಂಬ ವಾಕ್ಯ ದಿಂದ ನೀವೆಲ್ಲರೂ ಪ್ರಭಾವಿತ ರಾಗಿದ್ದೀರಿ ಎಂದು ನಾನು ನೆನಿಸುತ್ತೇನೆ. ಯೇಸು ಈ ಮಾತುಗಳನ್ನು ಮಾತನಾಡುವಾಗ, ದೊಡ್ಡ ಪ್ರಶಂಸೆಯನ್ನು ನಮಗೆ ಕೊಟ್ಟನು. ನಾವು ಕರ್ತನಿಗೆ ವಿಶೇಷವಾಗಿದ್ದೇವೆ; ನಾವು ಬೆಲೆಬಾಳುವವರಾಗಿದ್ದೇವೆ. ನಮ್ಮನ್ನು ನಾವು ಅಲ್ಪವಾದುದಕ್ಕೆ ಮಾರಿಕೊಳ್ಳುವದು ಬೇಡ.

ಆತನು ನಮಗೆ ದೊಡ್ಡ ಸವಾಲನ್ನೂಕೂಡಾ ಕೊಟ್ಟಿದ್ದಾನೆ. "ಯಾವ ಉಪಯೋಗಕ್ಕೂ ಬಾರದವನು" ಎಂಬ ಹೇಳಿಕೆಯನ್ನು ಒಬ್ಬನ ವಿರುದ್ಧ ಮಾತನಾಡುವಂತದರ ಮುಂದೆ ಯಾವ ದೊಡ್ಡ ಅವಮಾನವೂ ಇಲ್ಲ. ಆತ್ಮೀಕವಾಗಿ ನಾನು "ಯಾವ ಉಪಯೋಗಕ್ಕೂ ಬಾರದವನು" ಆಗಿರಲಾರೆ, ನಿನ್ನ ಬಗ್ಗೆ ಏನು? ಜಗತ್ತಿನಿಂದ ಭಿನ್ನವಾದ ವಿಶೇಷ ಜೀವಿತವನ್ನು ಜೀವಿಸಲು ನಾವು ಪಣತೊಡಣ. ನಾವೆಲ್ಲರೂ "ಭೂಮಿಗೆ ಉಪ್ಪಾಗಿರು"ವುದರ ಬಗೆಗೆ ದೇವರು ನಮಗೆ ಸಹಾಯ ಮಾಡಲಿ![19]

---

ಟಿಪ್ಪಣೆಗಳು

[1]"ಅಲ್ಪದರಲ್ಲಿ ಮಾರುವದು" ಇದು ಏನೋ ಒಂದನ್ನು ಅದರ ಬೇಲೆಗಿಂತ ಕಡಿಮೆ (ಸಾಮಾನ್ಯವಾಗಿ ಬಲು ಕಡಿಮೆ) ಬೆಲೆಗೆ ಮಾರುವುದು ಆಗಿದೆ, ಒಬ್ಬನು ತನ್ನನ್ನು "ಅಲ್ಪವಾದುದಕ್ಕೆ ಮಾರಿಕೊಂಡಿದ್ದಾದರೆ" ತನ್ನ ನಿಜ ಬೆಲೆಯನ್ನು ಕಳೆದುಕೊಳ್ಳತ್ತಾನೆ, ಪ್ರತಿಯೊಬ್ಬ ಕ್ರೈಸ್ತನು "ತನ್ನ ಯೋಗ್ಯತೆಗೆ ಮೀರಿ ತನ್ನನ್ನು ಭಾವಿಸಿ" (ರೋಮಾಪುರ 12:3) ಕೊಳ್ಳುವ ಬಗ್ಗೆ ಜಾಗರೂಕನಾಗಿರಬೇಕು, ಅದೇ ಸಮಯದಲ್ಲಿ, ಆತನು ಅನುಪಯುಕ್ತ ಎಂದು ಮಾತ್ರ ಭಾವಿಸದಿರಲಿ, ನಮ್ಮ ಮೌಲ್ಯವು ವೈಯಕ್ತಿಕ ಬೆಲೆಯಿಂದ ಉತ್ಪನ್ನವಾ ಗುವುದಿಲ್ಲ, ಬದಲಾಗಿ ಆ ಬೆಲೆಯು ದೇವರು ನಮ್ಮನ್ನು ಇರಿಸಿದವುಗಳ ಮೇಲೆ ಇದೆ. "ಅಲ್ಪವಾದುದ್ದಕ್ಕೆ ಮಾರು" ಎಂಬ ಶಬ್ದಪ್ರಯೋಗ ನೀನು ಇರುವೆಡೆಯಲ್ಲಿ ಅಪರಿಚಿತವಾಗದ್ದಿರೆ, ನಿನ್ನ ಕೇಳುಗರಿಗೆ ಚಿರಪರಿಚಿತವಾಗಿರುವಂಥ ಅದಕ್ಕೆ ಸಮಾನವಾದ ಅರ್ಥವನ್ನು ಹೊಂದಿದೆ ಶಬ್ದ ಪ್ರಯೋಗ ವನ್ನು ಬಳಸಿರಿ. [2]ರಕ್ತವಾಹಿನಿಯು ಮೂಲತಹವಾಗಿ ಸಲೈನ್ ದ್ರಾವಕವಾಗಿರುತ್ತದೆ. ಕೆಲ ರೋಗಿ ಗಳಿಗೆ ವೈದಕೀಯ ಕಾರಣಗಳಿಗಾಗಿ ಉಪ್ಪನ್ನು ತಿನ್ನುವುದುನ್ನು ತ್ಯಜಿಸಲು ಹೇಳುತ್ತಾರೆ. ಹೇಗೋ, "ಉಪ್ಪು ರಹಿತ" ಎಂದು ಕರೆಯಲ್ಪಡುವ ಪಥ್ಯದ ಆಹಾರದಲ್ಲಿಯೂ ಕೂಡಾ ಅಲ್ಪ ಉಪ್ಪಿನಾಂಶ ಇರುತ್ತದೆ. [3]ನಿಯಮದಂತೆ, ಈ ಸರಣಿಯಲ್ಲಿ ಪ್ರತಿಯೊಂದೂ ಪಾಠಕ್ಕೂ ಸಂಬಂಧಿಸಿದಂತೆ ಒಂದು

ಪ್ರಸಂಗವಿದೆ, ಆದರೆ ಕ್ವಚಿತ್ತಾಗಿ ನಾನು ಎರಡನ್ನು ಮಾತ್ರ ಹೊಂದಿದ್ದೇನೆ. ಒಬ್ಬನು ಭಾನುವಾರ ಮುಂಜಾನೆ ಮತ್ತು ಇನ್ನೊಬ್ಬನು ಭಾನುವಾರ ಸಂಜೆಯಲ್ಲಿ ಅಥವಾ ಮತ್ತೇ ಕೆಲವರು ಸಭೆಯವರು ಕೂಡಿದೆಡೆಯಲ್ಲಿ ಪ್ರಸಂಗಿಸಿಬಹುದು. [4]ಈ ಪ್ರಶಂಸೆಯ ಉದ್ಘಾರವು ಸ್ವಯಂವೇದ್ಯವಾರಬಹುದು. ನೀನು ಇರುವೆಡೆಯಲ್ಲಿ ಜನರು ಈ ವಿವರಣೆಯನ್ನು ಬಳಸಿದ್ದಾದರೇ, ಜಗತ್ತಿನ ಕೇಲಭಾಗದಲ್ಲಿ, ಒಬ್ಬನಿಗೆ ಶ್ರೇಷ್ಟವಾದ ಪ್ರಶಂಸೆಯನ್ನು ಕೊಡುತ್ತಾ "ಆತನು ಭೂಮಿಗೆ ಉಪ್ಪಾಗಿದ್ದಾನೆ ಎಂದು ಹೇಳುವರು" ಎಂದು ನೀನು ವಿವರಿಸಬಹುದು. [5]ಈ ವಿವರಣೆಯು ನೀನು ಇರುವೆಡೆಯಲ್ಲಿ ಬಳಕೆಯಾಗದಿದ್ದಾದರೆ, "ಆತನು ಭೂಮಿಗೆ ಉಪ್ಪುಗಿದ್ದಾನೆ" ಎಂಬ ಉಧ್ಗಾರದಂತೆ ಅದೇ ರೀತಿಯಲ್ಲ ಅದನ್ನು ಬಳಸಿರಿ. (ಹಿಂದಿನ ಅಡಿನುಡಿಯನ್ನು ನೋಡಿರಿ.) [6]ಯೊಬನು ತನ್ನ "ಸೇಹಿತರ" "ನೆಮದಿ"ಯು ಉಪ್ಪುರಹಿತ ಆಹಾರದಂತೆ ಇರವದು ಎಂದು ಹೇಳುತ್ತನೆ. ಕೊಲಸ್ಸೆ 4:6ರಲ್ಲಿ ಇದಕ್ಕೆ ಹೊಂದಿದಂತೆ ಇರುವ ಇನ್ನೊಂದು ಪರಿಚ್ಚೇದವು ಉಪ್ಪಿನ ರುಚಿಯನ್ನು ಸೇರಿಸುವುದಾಗಿದ್ದು "ನಮ್ಮ ಸಂಭಾಷಣೇಯು ರಸವತ್ತಾಗಿ ಇರಲಿ" ಎಂದು ಮಾತಿನ ಬಗೆಗೆ ಹೇಳುವುದಾಗಿದೆ. ನಮ್ಮ ಮಾತುಗಳು ರಸವತ್ತಾಗಿರಲು ಸದಾ ಪ್ರಯತ್ನಿಸ ಬೇಕು. [7]A. C. Dixon, quoted in Leslie G. Thomas, *The Sermon on the Mount: A Series of Studies in the Moral and Religious Teaching of Jesus* (Nashville: Gospel Advocate Co., 1958), 22. [8]ನೀವು ಇರುವೆಡೆಯಲ್ಲಿ "ನೀರಸ" ಎಂಬ ಅರ್ಥವನ್ನು ಕೊಡುತ್ತಿದ್ದಿದ್ದಾರೆ, "ನೀರಸ ದಿಂದ ಕೊನೆಗೊಳ್ಳುವುದು" ಎಂದು ನೀವು ಹೇಳಬಹುದು. [9]ಈ ವಿವರಣೆಯ ಅರ್ಥವು "ಒಬ್ಬ ಮನುಷ್ಯ ಮಾಡಬಯಸದ್ದನ್ನು ಮಾಡುವಂತೆ ನೀವು ಒತ್ತಾಯಿಸಲಾರಿರಿ" ಎಂದರ್ಥವನ್ನು ಕೊಡುತ್ತದೆ. [10]ಕೊಳೆತುಹೋದ ಮಾಂಸದ ಬಗೆಗೆ ನಿಮಗೇನಾದರೂ ವೈಯಕ್ತಿಕವಾದ ಅನುಭವ ಇದ್ದಿದ್ದಾದರೆ, ಅದನ್ನು ನಿಮ್ಮ ಕೇಳುಗರಿಗೆ ಹೇಳಿರಿ.

[11]ಮಾಂಸವನ್ನು ಸಂರಕ್ಷಿಸುವ ಇನ್ನೊಂದು ವಿಧಾನವೆಂದರೆ ಒಣಗಿಸುವಿಕೆಯೇ ಆಗಿದೆ. ಕಿಂಚಿತ್ತಾಗಿ ಒಣಗಿದ ಮಾಂಸವು ಇತರ ಮಾಂಸಗಳಿಗಿಂತ ಉತ್ತಮವಾಗಿರುತ್ತದೆ. [12]U.S. ನ ಕೆಲ ಭಾಗಗಳು ಮತ್ತು ಇತರ ಸ್ಥಳಗಳಲ್ಲಿ, ಇನ್ನೂ ಇದು ಸಾಮಾನ್ಯವಾದ ಅಭ್ಯಾಸವಾ ಗಿದೆ. [13]ಅದಲ್ಲದೆ, ಜಗತ್ತಿನ ಭಾಗವಾಗಿರುವಂತ ನೀವು ವಾಸಿಸುವ ಸ್ಥಳದ ಬಗೆಗೆ ನೀವು ಕೊಡಲು ಬಯಸಿದ್ದೇ ಆದರೆ, ನೀಮ್ಮ ಸುತ್ತಲಿರುವ ಜಗತ್ತಿನಲ್ಲಿ ದೇವರಿಗೆ ಮನ್ನಣೆ ಕೊಡದಿರುವದು ಬೆಳೆಯುತ್ತಾ ಇರುವುದನ್ನು ನೀಮ್ಮ ಆ ಅಂಕಿ ಅಂಶವು ತೋರಿಸಬಹುದು. [14]U.S. ನಲ್ಲಿ ಆಕ್ಷೇತ್ರದ ಉದ್ಯೋಗಪತಿ ಮತ್ತ ಇತರ ಪ್ರಭಾವಿ ವ್ಯಕ್ತಿಗಳ ಸಂಯುಕ್ತ ಸಂಸ್ಥಗಳನ್ನು ಹೊಂದಿದ ಅನೇಕ ವಾಣಿಜ್ಯ ಮಂಡಳಿಗಳನ್ನು ಹೊಂದಿವೆ. ಇದು ಸರಕಾರದ ಅಂಗವಾಗಿಲ್ಲದಿದ್ದರೂ ಆ ಕ್ಷೇತ್ರವನ್ನು ಬೆಳೆಯಲು ಮತ್ತು ಅಭಿವೃದ್ಧಿ ಹೊಂದುವಂತೆ ಮಾಡಲು ಸರಕಾರವು ಪ್ರೋತ್ಸಾಹಿಸುವುದಾಗಿದೆ. [15]ಎಲ್ಲಾ ಗ್ರೀಕ್ ಕ್ರಿಯಾಪದಗಳೊಂದಿಗಿನ ಎಲ್ಲ ಸಂಗತಿಗಳಂತೆ ಮತ್ತಾಯ 5:13ರಲ್ಲಿನ "ಇದ್ದಾರೆ" ಎಂಬ ಕ್ರಿಯಾಪದವು ಅರಿತುಕೊಳ್ಳಬಹುದಾದ ಅಂಶವಾಗಿದೆ (ಈ ಪ್ರಕರಣದಲ್ಲಿ "ನೀವು" ಎಂದಾಗಿದೆ. ವಾಕ್ಯದ ಆರಂಭದಲ್ಲಿ ಪದಕ್ಕೆ ಒತ್ತುಕೊಡುವ ನಿಟ್ಟಿನಲ್ಲಿ "ನೀನು" ಎಂಬ ಗ್ರೀಕ್ ಪದವನ್ನು ಸೇರಿ ಸಲಾಗಿದೆ). [16]ನಿಮ್ಮ ಸಮಾಜದ ಪ್ರಾಂತ್ಯದ ವಿಚಿತ್ರ ಸ್ವಾಭಾವದ/ಅಥವಾ ದರಿಸಿನ ಉದಾಹರಣೆಯನ್ನು ಬೇಕಿದ್ದರೆ ನೀವು ಬಳಸಬಹುದು. ಈ ಪಾಠವನ್ನು ಒಂದು ಸಾರಿ ನಾನು ಬೋಧಿಸಿದಾಗ, ಜನರ ಇತ್ತೀಚಿನ ಭ್ರಮೆ ಎಂದರೆ ಹಸಿರು ಸ್ಪೈಕ್ ಕೂದಲು ಆಗಿದ್ದು, ಅಂಥ ಜನರನ್ನು ನನ್ನ ಕೇಳುಗರು ಟಿ ವಿಯಲ್ಲಿ ನೊಡಿದ್ದಾರೆ. ನಾನು ಅವರಿಗೆ "ಇದರ ಅರ್ಥ ನಾವೆಲ್ಲರೂ ಹಸಿರು ಸ್ಪೈಕ್ ಕೂದಲಿನವರ ಆಗಬೇಕೆಂದಲ್ಲ: ಇದರ ಅರ್ಥ ನಾವು ವಿಷೇಶವಾದವರು ಆಗಬೇಕು" ಎಂದು ಹೇಳಿದನು. [17]Rebecca Manley Pippert, *Out of the Salt Shaker & into the Word* (Downers Grove, Ill.: InterVarsity Press, 1979). [18]ಸೋಡಿಯಂಕ್ಲೋರೈಡ್ ಸಾಮಾನ್ಯ ಉಪ್ಪಿನ ವೈಜ್ಞಾನಿಕ ಹೆಸರಾಗಿದೆ. [19]ಈ ಪ್ರಸಂಗವನ್ನು ನೀವು ಬಳಸುವಾಗ ಯಾವುದಕ್ಕೆ ಯೋಗ್ಯವಾದ ಪ್ರಭಾವವಿರುವದು ಅದನ್ನು ಮಾಡಲು ನಿಮ್ಮ ಕೇಳುಗರಿಗೆ ಪ್ರೋತ್ಸಾಹಿಸುವವರಾಗಿರಿ, ಕೆಲವರು ನಂಬಿಕೆ ಮತ್ತು ದೀಕ್ಷಾಸ್ನಾನದ ಮೂಲಕ ಕ್ರೈಸ್ತರಾಗುವ ಅವಷ್ಯಕತೆಯನ್ನು ಹೊಂದಿರುತ್ತಾರೆ (ಮಾರ್ಕ 16:16). ಅಪನಂಬಿಗಸ್ತ ಕ್ರೈಸ್ತರಿಗೆ ಪಶ್ಚಾತ್ತಾಪ, ಪ್ರಾಯಶ್ಚಿತ, ಮತ್ತು ಪ್ರಾರ್ಥನೆಗಳ ಮೂಲಕ ಪುನಸ್ಥಾಪಿಸುವದು ಅವಶ್ಯವಿದೆ (ಅಪೊಸ್ತಲರ ಕೃತ್ಯಗಳು 8:22: ಯಾಕೋಬ 5:16).